# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 373
2. ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.07.2024.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2022-23ನೇ 31.03.2023ರ ಅಂತ್ಯಕ್ಕೆ ಆರ್ಥಿಕ ಸಾಲಿನಲ್ಲಿ ಎಲ್ಲಾ ಲೆಕ್ಕ ಶೀರ್ಷಿಕೆಗಳಲ್ಲಿ ಬಳಕೆಯಾಗದ ಅನುದಾನವೆಷ್ಟು; | ಯಾವುದೇ ಆರ್ಥಿಕ ವರ್ಷದಲ್ಲಿ ರಾಜ್ಯವಲಯದಡಿ ಬಿಡುಗಡೆಯಾದ ಮೊತ್ತದಲ್ಲಿ ಲೆಕ್ಕ ಶೀರ್ಷಿಕೆವಾರು ಖರ್ಚಾಗದೇ ಉಳಿದ ಅನುದಾನವನ್ನು ಆಯಾ ವರ್ಷಾಂತ್ಯದಲ್ಲಿ ಇಲಾಖೆಗಳು ಅದ್ಯರ್ಪಣೆ ಮಾಡುವರು. ಅದ್ಯರ್ಪಣೆ ಮಾಡದೇ ಉಳಿದಿರುವ ಅನುದಾನವು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ-1(15) ಹಾಗೂ ಅನುಚ್ಛೇದ 305 ರಂತೆ ಆರ್ಥಿಕ ವರ್ಷಾಂತ್ಯಕ್ಕೆ ವ್ಯಪಗತವಾಗುವುದರಿಂದ (Lapse) ಆ ಮೊತ್ತವನ್ನು ಅಮಾನತ್ತು ಶೀರ್ಷಿಕೆ/ಸಂಚಿತ ನಿಧಿಗೆ ವರ್ಗಾಯಿಸಲಾಗುವುದಿಲ್ಲ.<br><br>2022-23ನೇ ಸಾಲಿಗೆ ಎಲ್ಲಾ ರಾಜ್ಯವಲಯದ ಲೆಕ್ಕಶೀರ್ಷಿಕೆಗಳಡಿ ಇಲಾಖೆಗಳಿಗೆ ಹಂಚಿಕೆಯಾದ ಹಣದಲ್ಲಿ ಬಳಕೆಯಾಗದೇ ಉಳಿದ ಅನುದಾನವು ವ್ಯಪಗತವಾಗಿರುತ್ತದೆ. ಮಹಾಲೇಖಪಾಲರು ಈ ರೀತಿ ವ್ಯಪಗತವಾದ ಮೊತ್ತವನ್ನು ಹಣಕಾಸು ಲೆಕ್ಕಗಳಲ್ಲಿ "ಉಳಿತಾಯ" ಎಂದು ತೋರಿಸಿರುತ್ತಾರೆ.<br><br>ಮುಂದುವರೆದು, ಖಜಾನೆ ಮೂಲಕ ಮಾಡಲಾಗುವ ಇ-ಪಾವತಿಗಳ ಮೊತ್ತದಲ್ಲಿ ವಿಫಲವಾದ ಇ-ಪಾವತಿಗಳ ಮೊತ್ತವು ಖಜಾನೆವಾರು ಅಮಾನತ್ತು ಲೆಕ್ಕ ಶೀರ್ಷಿಕೆಗೆ |
| ಆ | ಬಳಕೆಯಾಗದ ಅನುದಾನದಲ್ಲಿ ಸಂಚಿತ ನಿಧಿಗೆ ಜಮೆಯಾದ ಮೊತ್ತವೆಷ್ಟು; (ವಿವರ ಒದಗಿಸುವುದು) | |

| | | |
|---|---|---|
| | | 8658 ಗೆ (Suspense HOA) ಜಮಾ ಆಗುವುದು. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ-75ರ ಪ್ರಕಾರ ಈ ರೀತಿ ವಿಫಲವಾದ ಇ-ಪಾವತಿಗಳನ್ನು ಒಂದು ವರ್ಷದೊಳಗೆ ಸಂಬಂಧಪಟ್ಟ ಡಿಡಿಓ ರವರು ಪುನಃ ಪಾವತಿಸಲು ಅವಕಾಶವಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆಇ 25 ಟಿಎಆರ್ 2020 ದಿನಾಂಕ 21.09.2020 ರನ್ವಯ "ಒಂದು ವರ್ಷ ಮೀರಿದ ವಿಫಲ ಇ-ಪಾವತಿಗಳಿಗೆ ಖಜಾನಾಧಿಕಾಗಳು, ಲೆಕ್ಕ ಬದಲಾವಣೆ ಪತ್ರ ತಯಾರಿಸಿ ಮಹಾಲೇಖಪಾಲರಿಗೆ ಸಲ್ಲಿಸಿ, ಮಹಾಲೇಖಪಾಲರಿಂದ ಲೆಕ್ಕ ಬದಲಾವಣೆ (Alteration memo) ಅನುಮೋದನೆ ಪಡೆದ ನಂತರ ಕ್ಲೈಮುಗಳು ಯಾವ ಲೆಕ್ಕ ಶೀರ್ಷಿಕೆಯಿಂದ ಭರಿಸಲಾಗಿದೆಯೋ ಆ ಪ್ರಧಾನ ಲೆಕ್ಕ ಶೀರ್ಷಿಕೆ XXXX-911-0-02-Recovery of Over Payment of earlier Year ರಡಿಗೆ ಜಮೆ ಮಾಡಿ ಲೆಕ್ಕ ಶೀರ್ಷಿಕೆ 8658 ಅಮಾನತ್ತು ಲೆಕ್ಕ ಶೀರ್ಷಿಕೆಗೆ ಖರ್ಚು ಹಾಕುವುದು" ಎಂಬ ಸೂಚನೆಗಳಿರುತ್ತವೆ. |
| ಇ | ಇದರಲ್ಲಿ ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡದೆ ಅಮಾನತ್ತು ಲೆಕ್ಕ ಶೀರ್ಷಿಕೆ/ಬೇರೆ ಯಾವುದೇ ಮೂಲದಲ್ಲಿ ಸಂಗ್ರಹವಾದ ಮೊತ್ತವೆಷ್ಟು; | 2022-23ನೇ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಲಾದ ಮೊತ್ತಗಳಲ್ಲಿ ವಿಫಲವಾದ ಇ-ಪಾವತಿಗಳ ಮೊತ್ತವನ್ನು ಖಜಾನೆವಾರು ಅಮಾನತ್ತು ಲೆಕ್ಕ ಶೀರ್ಷಿಕೆ 8658 ಗೆ ವರ್ಗಾವಣೆಯಾಗಿದ್ದು, ಅದರ ಒಟ್ಟು ಮೊತ್ತವು ರೂ 596,13,36,157/- ಆಗಿರುತ್ತದೆ.<br><br>2022-23 ನೇ ಆರ್ಥಿಕ ವರ್ಷದಲ್ಲಿ ವಿಫಲವಾದ ಇ-ಪಾವತಿಗಳ ಒಟ್ಟು ಮೊತ್ತದಲ್ಲಿ 2023-24 ರಲ್ಲಿ ಈ ವರೆಗೆ ರೂ.574,56,82,743/- ಗಳನ್ನು ಸಂಬಂಧಿಸಿದ ಡಿಡಿಓ ರವರಿಂದ ಅಮಾನತ್ತು ಲೆಕ್ಕ ಶೀರ್ಷಿಕೆಯಿಂದ ಸೆಳೆದು ಸರಿಯಾದ ಸ್ವೀಕರ್ತದಾರರಿಗೆ (Recipient) ಸಂದಾಯ ಮಾಡಲಾಗಿದೆ. ಅದರಂತೆ ಸಂದಾಯ ಮಾಡದೇ ಅಮಾನತ್ತು ಲೆಕ್ಕ ಶೀರ್ಷಿಕೆಯಲ್ಲೇ ಉಳಿದ ಹಾಗೂ ಒಂದು ವರ್ಷಕ್ಕೂ ಮೀರಿ ಸೆಳೆಯದೇ ಇರುವ |

| | | |
|---|---|---|
| ಈ | ಇದರಲ್ಲಿ ವಿಧಾನ ಮಂಡಲದ ಅನುಮೋದನೆ ಪಡೆಯದೇ ಬಳಕೆ ಮಾಡಿದ ಮೊತ್ತವೆಷ್ಟು? | ರೂ.21,56,53,414/- ಗಳ ಮೊತ್ತಕ್ಕೆ ಲೆಕ್ಕ ಬದಲಾವಣೆ ಪತ್ರಗಳನ್ನು ಆಯಾ ಜಿಲ್ಲಾ ಖಜಾನೆಗಳಿಂದ ಮಹಾಲೇಖಪಾಲರಿಗೆ ಸಲ್ಲಿಸಲಾಗುತ್ತಿದೆ.<br><br>ZP/TP ಲೆಕ್ಕ ಶೀರ್ಷಿಕೆಗಳಡಿ ನಿಧಿ ಖಾತೆ-II(Fund Accounts-II) ವಿವಿಧ ಲೆಕ್ಕ ಶೀರ್ಷಿಕೆಯಡಿ ಖರ್ಚಾಗದೇ ಉಳಿದ ಮೊತ್ತವನ್ನು ಆಯಾ ವರ್ಷದ ಲೆಕ್ಕ ಪತ್ರಗಳು ಮುಕ್ತಾಯವಾದ ನಂತರದ ವರ್ಷದ ಆಯವ್ಯಯದಲ್ಲಿ ಆಯಾ ಪ್ರಧಾನ ಲೆಕ್ಕ ಶೀರ್ಷಿಕೆಯಡಿ Deduct Recovery of Overpayments of Previous Years ಎಂದು ತೋರಿಸಿ Reduction of Expenditure ಮಾಡಲಾಗುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ FD 437 EXP.6/2016 DATED:22-12-2016 ರಲ್ಲಿ ತಿಳಿಸಿರುವಂತೆ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಸರ್ಕಾರದ ಅದೇಶ ಹೊರಡಿಸುವ ಮೂಲಕ ಮಹಾಲೇಖಪಾಲರ ಪುಸ್ತಕಗಳಲ್ಲಿ ಮುಂದಿನ ವರ್ಷದ ವೆಚ್ಚಗಳನ್ನು ಕಡಿಮೆ ಮಾಡಲು ಪುಸ್ತಕ ಹೊಂದಾಣಿಕೆ ಮಾಡಲು ಸರ್ಕಾರಿ ಆದೇಶವನ್ನು ಹೊರಡಿಸಬೇಕಾಗಿದೆ.<br><br>ಅದರೆ, ಮಹಾಲೇಖಪಾಲರು ZP/TP Fund-II ನಲ್ಲಿ ಬಳಕೆಯಾಗದೆ ಉಳಿದ ಮೊತ್ತದ ಬಗ್ಗೆ ಆರ್ಥಿಕ ಇಲಾಖೆಯು ಅನುಸರಿಸುತ್ತಿರುವ ಕ್ರಮಕ್ಕೆ ಆಕ್ಷೇಪಿಸಿದ್ದರಿಂದ 2021-22ನೇ ಸಾಲಿನಿಂದ ಬಳಕೆಯಾಗದೆ ಉಳಿದ ಮೊತ್ತಕ್ಕೆ Write back ಅದೇಶ ಹೊರಡಿಸಿರುವುದಿಲ್ಲ. ಈ ಸಂಬಂಧ ಮಹಾಲೇಖಪಾಲರೊಂದಿಗೆ ನಡೆದ Entry Conference ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ್ದು, ಇತರೆ ರಾಜ್ಯಗಳಲ್ಲಿ ಈ ಬಗ್ಗೆ ಯಾವ ರೀತಿ ಕ್ರಮ ಅನುಸರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿದೆ.<br><br>ವಿಧಾನ ಮಂಡಲದ ಅನುಮೋದನೆ ಪಡೆಯದೇ ಯಾವುದೇ ಅನುದಾನವನ್ನು ಬಳಕೆ ಮಾಡಲು ಅವಕಾಶ ಇರುವುದಿಲ್ಲ. |

ಸಂಖ್ಯೆ: ಆಇ 46 ಬಿಜಿಎಲ್ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ